ಕಾಡಿಗೆ ಕಣ್ಣು

ಕಲೀಮ್ ಉಲ್ಲಾ



# ಮ್ಯಾನ್ ಈಟರ್‌ನ ಮಮತೆಯ ಮಗಳು ಪಾರ್ವಾಲಿ

ಒಮ್ಮೆಗೆ ಮಿಂಚಿನಂತೆ ದಾಳಿ ಮಾಡಿದ ಪಾರ್ವಾಲಿ ಹಾರಿ ಜಿಂಕೆ ಮರಿಯನ್ನು ಹಿಡಿದೇ ಬಿಟ್ಟಳು. ಮರಿಯ ಚೀತ್ಕಾರವೂ, ಹುಲಿಯ ಆರ್ಭಟವೂ ಕೇಳಿಸಿತು. ಒಣಗಿದ ಹುಲ್ಲು ಅಡ್ಡವಿದ್ದ ಕಾರಣ ಕ್ಯಾಮೆರಾ ಕಣ್ಣಿಗೆ ಚಿತ್ರಗಳು ಸ್ಪಷ್ಟವಾಗಿ ಸಿಗಲಿಲ್ಲ. ಹುಲಿ ಅಟ್ಟಿಸಿಕೊಂಡು ಬಂದಾಗ ಎದ್ದ ದೂಳು, ಕೆಲವೇ ಕ್ಷಣಗಳಲ್ಲಿ ಸ್ತಬ್ಧಗೊಂಡ ಜಿಂಕೆಮರಿಯ ಕೂಗು. ಜಿಂಕೆಯ ಕುಟುಂಬ ಹೆದರಿ ಓಡುತ್ತಿದ್ದ ಹಾಗೆ ಸುತ್ತಲ ಕಾಡಿನಿಂದ ಪ್ರಾಣಿ ಪಕ್ಷಿಗಳ ಕಿರುಚಾಟ ಶುರುವಾಯಿತು.

ಒಂದು ನೋಡಿದರೆ ಎಲ್ಲವೂ ಅವ್ಯವಸ್ಥೆ. ಏನಾಗುತ್ತಿದೆ ಎಂದು ಇಣುಕಿದರೆ ಇಡೀ ರೂಮಿನಲ್ಲಿ ಮಂಗಗಳು ಅಂದಾದುಂಧಿಯಾಗಿ ಕುಣಿಯುತ್ತಿವೆ. ಬೀಗ ತೆಗೆದು ಒಳ ಬರುವುದನ್ನು ನೋಡಿದ ದಢೂತಿ ಗಡವ 'ಗುರ್...' ಎಂದು ಹಲ್ಲು ಮಸೆದು ಮೈಮೇಲೆ ಎಗರಿತು. ಇದರ ಆಕ್ರಮಣ ನನಗೆ ಅನಿರೀಕ್ಷಿತವಾಗಿತ್ತು. ಕಂಗಾಲಾಗಿ ಹಿಂದೆ ಹೋಗಿ ಒಮ್ಮೆಗೇ ಬಾಗಿಲು ಜಡಿದು ಹೊರಗೆ ನಿಂತೆ. ಜಿಮ್ ಕಾರ್ಬೆಟ್ ಕಾಡಿನಲ್ಲಿ ಹುಲಿ, ಚಿರತೆಗಳನ್ನು ನಿನ್ನೆಯಿಂದ ತೀರಾ ಹತ್ತಿರದಿಂದ ನೋಡುತ್ತಿದ್ದೇನೆ. ಆಗೆಲ್ಲೂ ಉಂಟಾಗದ ಭಯ ಒಮ್ಮೆಗೇ ಈ ಮಂಗ್ಯಾ ಹುಟ್ಟಿಸಿತ್ತು. ಒಮ್ಮೆ ಸಹಾಯಕ್ಕೆ ಕಿರುಚಿದೆ. ಯಾರೂ ಕಾಣಲಿಲ್ಲ. ಬೆಳಗ್ಗೆ ಕಾಡಿನಿಂದ ಬಂದವರೆಲ್ಲಾ ತಮ್ಮ ತಮ್ಮ ರೂಮು ಸೇರಿದ್ದರು. ಗಾಜಿನ ಬಾಗಿಲಾದ ಕಾರಣ ಒಳಗೆ ನಡೆಯುತ್ತಿದ್ದ ರಣರಂಗ ಸಂಪೂರ್ಣ ಕಣ್ಣಿಗೆ ರಾಚುತ್ತಿತ್ತು. ಒಂದಲ್ಲ ಎರಡಲ್ಲ ಹತ್ತಕ್ಕೂ ಹೆಚ್ಚು ಕಪಿಗಳು ಒಟ್ಟಿಗೆ ನುಗ್ಗಿದ್ದವು. ನಮ್ಮ ಬ್ಯಾಗುಗಳ ಕಿತ್ತೆಸೆದು, ತಿನ್ನಲು ತಂದಿದ್ದ ಬಾಳೆಹಣ್ಣು, ಚಕ್ಕುಲಿ, ಖಾರ, ಕೋಡುಬಳೆ, ಗೋಡಂಬಿ ಎಲ್ಲಾ ಮುಗಿಸಿ ಕೇಕೇ ಹಾಕುತ್ತಿದ್ದವು. ವಾನರ ದಾಳಿಗೆ ಏನು ಮಾಡಬೇಕೆಂದು ತೋಚದೆ ಸಹಾಯಕ್ಕಾಗಿ ಕೂಗಿಕೊಂಡರೆ ಯಾರೂ ಕಾಣುತ್ತಿಲ್ಲ. ಶೂ, ಷಾ, ಒಯ್, ಥೂ, ಏಯ್, ಹೋ... ಎಂದು ಗೊತ್ತಿದ್ದ ಎಲ್ಲಾ ಪದಗಳ ಬಳಸಿ ಗದರಿಸಿದರೂ ಅವು ಜಪ್ಪಯ್ಯ ಎನ್ನುತ್ತಿಲ್ಲ. 'ಥುತ್... ಹೋಗ್ರೋ ಮಂಗ ಮಂಡೇವಾ' ಎಂದು ಕನ್ನಡದಲ್ಲಿ ಬೈದಿದ್ದಂತೂ ನನಗೆ ಬಿಟ್ಟರೆ ಅಲ್ಲಿ ಇನ್ಯಾರಿಗೂ ಅರ್ಥವಾಗಲಿಲ್ಲ.

ಧೈರ್ಯ ಮಾಡಿ ಹೊರಗೆ ಸಿಕ್ಕ ಕಡ್ಡಿಪೊರಕೆಗೆ ಕಟ್ಟಿದ್ದ ಕೋಲು ಹಿಡಿದು ಮುನ್ನುಗ್ಗಲು ನೋಡಿದೆ. ನೆಲದ ಮೇಲೆ ಉಚ್ಚೆ ಹೊಯ್ದು, ಬೆಡ್ಡಿನ ಮೇಲೆ ಕಕ್ಕ ಮಾಡಿ ಕಾಲಿಡಲು ತಾವಿಲ್ಲದಂತೆ ಅಸಹ್ಯ ಹುಟ್ಟಿಸಿದ್ದವು. ಈಗ ಏನು ಮಾಡುವುದು ಎಂದು ತೋಚದಂತಾಗಿತ್ತು. ಒಂದು ಗಡವನ ಗದರಿಸಿದರೆ, ಅದು ಓಡಿ ಹೋಗಿ ಇನ್ನಿಬ್ಬರನ್ನು ಒಳಗೆ ಕಳಿಸುತ್ತಿತ್ತು. ಬಂದ ಪ್ರತಿ ಮಂಗವೂ ನಾನೇ ಅತಿಕ್ರಮ ಪ್ರವೇಶ ಮಾಡಿದ್ದೇನೆ ಎನ್ನುವಂತೆ ಕಿಚಾಯಿಸತೊಡಗಿದವು. ಈ ದಟ್ಟ ಕಾಡಿನಲ್ಲಿ ಅರಣ್ಯ ಇಲಾಖೆಯವರು ರೂಮು ಕಟ್ಟಿಸಿದ್ದೇ ತಪ್ಪು ಎಂದು ಅವು ಪ್ರತಿಭಟಿಸುತ್ತಿದ್ದವು. ಅವುಗಳ ಜಾಗದಲ್ಲಿ ನಾವೀಗ ಇರುವುದೇನೋ ನಿಜ. ಅಸಲಿಗೆ ಇವು ಮರದ ಮೇಲಿರಬೇಕು. ಅದು ಬಿಟ್ಟು ನಮ್ಮ ರೂಮಲ್ಲೇಕೆ ನುಗ್ಗಿ ಬಂದಿವೆ ಎಂದು ನನ್ನ ಸ್ವಾರ್ಥ ಮನಸ್ಸು